‘ಮ್ಯಾನ್ ಆಫ್ ದಿ ಮ್ಯಾಚ್’ ಸಿನಿಮಾ ರೂಪುಗೊಂಡಿದ್ದು.

◆ **ಒಟಿಟಿ ಮತ್ತು ಚಿತ್ರಮಂದಿರ ಇವೆರಡರಲ್ಲಿ ನಿಮ್ಮ ಆದ್ಯತೆ ಯಾವುದಕ್ಕೆ?**

ನಾನೊಬ್ಬ ನಿರ್ದೇಶಕನಾಗಿ ಚಿತ್ರಮಂದಿರಗಳಲ್ಲಿಯೇ ಸಿನಿಮಾ ಬಿಡುಗಡೆಯಾಗಬೇಕು ಎಂದು ಬಯಸುತ್ತೇನೆ. ಆದರೆ ಇಲ್ಲಿ ತುಂಬ ಸವಾಲುಗಳಿವೆ. ಕಡಿಮೆ ಬಜೆಟ್‌ನಲ್ಲಿ ಒಳ್ಳೆಯ ಸಿನಿಮಾ ಮಾಡುವುದು ಕಷ್ಟವಲ್ಲ. ಆದರೆ ಅದನ್ನು ಜನರಿಗೆ ತಲುಪಿಸುವುದು ಬಹಳ ಕಷ್ಟದ ದಾರಿ. ಅದಕ್ಕೆ ದೊಡ್ಡ ಬಜೆಟ್ ಬೇಕಾಗುತ್ತದೆ. ನನ್ನ ‘ರಾಮಾ ರಾಮಾ ರೇ’ ಸಿನಿಮಾವನ್ನು ಬಹಳ ಜನ ನೋಡಿಲ್ಲ. ‘ಒಂದಲ್ಲಾ ಎರಡಲ್ಲಾ’ ಸಿನಿಮಾ ಬಂದಿರುವುದೇ ತುಂಬ ಜನರಿಗೆ ಗೊತ್ತಿಲ್ಲ. ಆದರೆ ಒಟಿಟಿಯಲ್ಲಿ ಬಿಡುಗಡೆಯಾಗುತ್ತಿರುವ ‘ಮ್ಯಾನ್ ಆಫ್ ದಿ ಮ್ಯಾಚ್’ 60ರಿಂದ 62 ದೇಶಗಳಲ್ಲಿ ವೀಕ್ಷಣೆಗೆ ಲಭ್ಯ ಇರುತ್ತದೆ. ನಾನು ನನ್ನ ತಂತ್ರಜ್ಞರು, ಕಲಾವಿದರ ಬಗ್ಗೆಯೂ ಯೋಚಿಸಬೇಕಲ್ಲ. ಬೇರೆ ಭಾಷೆಗಳ ಯಾರಾದರೂ ಈ ಸಿನಿಮಾ ನೋಡಿ, ಇಲ್ಲಿನ ಕಲಾವಿದರು, ತಂತ್ರಜ್ಞರನ್ನು ಇಷ್ಟಪಟ್ಟು ಅವಕಾಶ ಕೊಡಬಹುದು. ಅದರಿಂದ ಅವರ ಬದುಕೇ ಬದಲಾಗಿಬಿಡಬಹುದು. ಹಾಗಾಗಿ ಜನರಿಗೆ ತಲುಪುವ ದೃಷ್ಟಿಯಿಂದ ನೋಡಿದರೆ ಒಟಿಟಿ ಬಿಡುಗಡೆಯ ಬಗ್ಗೆ ಖುಷಿಯಿದೆ.

◆ **ಈ ಸಿನಿಮಾದ ವಸ್ತು ಏನು?**

ಈ ಸಿನಿಮಾದ ಮೂಲಕ ನಾವು ಸ್ವಾತಂತ್ರ್ಯದ ಕುರಿತು ಮಾತಾಡುತ್ತಿದ್ದೇವೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಪಾಡಿಗೆ ತಾನು ಬದುಕುವಂಥ ವಾತಾವರಣ ಇರಬೇಕು. ಅವನ ಬದುಕು, ಅವನ ವೈಯಕ್ತಿಕ ಸಂಗತಿಗಳನ್ನು ಅವನ ಅನುಮತಿ ಇಲ್ಲದೆ ಇನ್ನೊಬ್ಬರು ಬಳಸಿಕೊಳ್ಳುವುದು ಸರಿಯಲ್ಲ. ಆದರೆ ಇಂದಿನ ತಂತ್ರಜ್ಞಾನದ ಯುಗದಲ್ಲಿ ಯಾರ ಬದುಕೂ ಸ್ವತಂತ್ರವಾಗಿಲ್ಲ. ನಮಗೆ ಗೊತ್ತಿಲ್ಲದೆಯೇ ನಾವು ಇನ್ಯಾರದೋ ಕುತೂಹಲಕ್ಕೆ, ವ್ಯಾಪಾರಕ್ಕೆ, ಸ್ವಾರ್ಥಕ್ಕೆ ವಸ್ತುವಾಗುತ್ತಿದ್ದೇವೆ. ಯಾರ ಬದುಕಿನ ಯಾವ ಸಂಗತಿಗಳನ್ನು ಬೇಕಾದರೂ ವಿಡಿಯೊ ಮಾಡಿ ಅಂತರ್ಜಾಲದಲ್ಲಿ ಹರಿಬಿಡಬಹುದು.

ಸ್ವಾತಂತ್ರ್ಯ ಎಂದರೆ ಧೈರ್ಯವಾಗಿ ಬದುಕುವುದು. ಇಂದು ನಾವೆಲ್ಲರೂ ಭಯದಲ್ಲಿಯೇ ಬದುಕುತ್ತಿದ್ದೇವೆ. ಪ್ರತಿಯೊಬ್ಬನೂ ಈ ದೃಷ್ಟಿಯಲ್ಲಿ ಸ್ವಾತಂತ್ರ್ಯವನ್ನು ಕಳೆದುಕೊಂಡು ಕೂತಿದ್ದಾನೆ. ಆ ಭಯ ಸೃಷ್ಟಿ ಮಾಡಿರುವುದು ತಂತ್ರಜ್ಞಾನ. ತಂತ್ರಜ್ಞಾನವೇ ಇಂದು ಸರ್ವಾಧಿಕಾರಿಯಾಗಿದೆ. ಇದೇ ವಿಷಯವನ್ನು ಲವಲವಿಕೆಯಿಂದ, ಕ್ಲೀಷೆ ಮಾಡದೆ, ಲಘುವಾದ ದಾಟಿಯಲ್ಲಿ ಹೇಳುವ ಪ್ರಯತ್ನವನ್ನು ‘ಮ್ಯಾನ್ ಆಫ್ ದಿ ಮ್ಯಾಚ್’ ಸಿನಿಮಾದಲ್ಲಿ ಮಾಡಿದ್ದೇವೆ.

◆ **ಈ ಆಧುನಿಕ ಕಾಲದ ಕಥೆಯಲ್ಲಿ ಗಾಂಧಿಗೇನು ಕೆಲಸ?**



ಗಾಂಧಿ ಅಂದಾಕ್ಷಣ ಅವರು ದೇಶದ ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟ ಮಾತ್ರವೇ ನಮ್ಮ ಮನಸ್ಸಿಗೆ ಬರುತ್ತದೆ. ಆದರೆ ಅವರ ಅರ್ಥದಲ್ಲಿ ಸ್ವಾತಂತ್ರ್ಯ ಎಂಬುದು ವಿಶಾಲವಾದ ಅರ್ಥವನ್ನು ಹೊಂದಿತ್ತು. ಅದು ಪ್ರತಿಯೊಬ್ಬ ಮನುಷ್ಯನನ್ನೂ ಮೌಲ್ಯಯುತವಾಗಿ, ನಿರ್ಭಯವಾಗಿ ಬದುಕಲು ಸಾಧ್ಯವಾಗುವ ವಾತಾವರಣದ ನಿರ್ಮಾಣ ಮಾಡುವ ಉದ್ದೇಶವನ್ನು ಹೊಂದಿತ್ತು. ಇನ್ನೊಬ್ಬರ ಬದುಕನ್ನು ನಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವುದನ್ನು ಅವರು ಒಪ್ಪುತ್ತಿರಲಿಲ್ಲ. ಅವರು ಪ್ರತಿಪಾದಿಸಿದ ಮೂರು ಕೋತಿಗಳು ಹೇಳುವುದೂ ಇದನ್ನೇ ಅಲ್ಲವೇ? ಕೆಟ್ಟದ್ದನ್ನು ಕೇಳಬೇಡ, ಕೆಟ್ಟದ್ದನ್ನು ನೋಡಬೇಡ, ಕೆಟ್ಟದ್ದನ್ನು ಆಡಬೇಡ ಎಂದು ಅವು ಹೇಳುತ್ತವೆ. ಆದರೆ ಇಂದು ಯಾವ ಸಾಮಾಜಿಕ ವೇದಿಕೆಗಳಲ್ಲಿಯೇ ನೋಡಲಿ, ಅನ್ಯರ ಬಗ್ಗೆ ಕೆಟ್ಟದ್ದನ್ನು ಆಡುವುದು, ನೋಡುವುದು, ಕೇಳುವುದೇ ನಡೆಯುತ್ತಿದೆ. ಅಂದಹಾಗೆ, ನಮ್ಮ ಸಿನಿಮಾದಲ್ಲಿ ಇರುವುದು ಗಾಂಧೀಜಿಯಲ್ಲ. ಅದೊಂದು ಪಾತ್ರವಷ್ಟೆ. ಆ ಪಾತ್ರದ ಮೂಲಕ ಗಾಂಧಿ ಪ್ರತಿಪಾದಿಸಿದ ಮೌಲ್ಯಗಳನ್ನೇ ಹೇಳಲು ಯತ್ನಿಸಿದ್ದೇವೆ.

◆ **‘ಮ್ಯಾನ್ ಆಫ್ ದಿ ಮ್ಯಾಚ್’ ಹೆಸರೇ ವಿಚಿತ್ರವಾಗಿದೆಯಲ್ಲ? ಯಾಕೆ ಈ ಹೆಸರು?**

ಈಗ ಪ್ರತಿಯೊಬ್ಬನಿಗೂ ಪ್ರತಿದಿನವೂ ಒಂದೊಂದು ಮ್ಯಾಚ್ ಎನ್ನುವಂತೆ ಆಗಿಬಿಟ್ಟಿದೆ. ಬೆಳಿಗ್ಗೆ ಎದ್ದು ಒಂದು ಗೋಲ್‌ನೊಂದಿಗೆ ಮನೆಯಿಂದ ಹೊರಡುತ್ತೇವೆ. ತಿರುಗಿ ಸಂಜೆ ಬರುವಾಗ ಆ ಗೋಲ್ ಅನ್ನು ಮುಟ್ಟಿದರೆ ಅವನೇ ಅಂದಿನ ಮ್ಯಾನ್ ಆಫ್ ದಿ ಮ್ಯಾಚ್. ಆದರೆ ಆ ಗೋಲ್ ಮುಟ್ಟುವುದು, ಅಂದರೆ ಗೆಲ್ಲುವುದು ಹೇಗೆ? ಬೇರೆಯವರನ್ನು ತುಳಿದು, ಶೋಷಿಸಿ ಗೆದ್ದರೆ ಅದೊಂದು ಗೆಲುವೇ? ಗೆಲುವು ಯಾವತ್ತೂ ನಿಯತ್ತು ಮತ್ತು ಮೌಲ್ಯಗಳ ಬಲದಿಂದ ಸಿಕ್ಕಬೇಕು. ಆಗ ಅದಕ್ಕೊಂದು ಅರ್ಥವಿರುತ್ತದೆ; ಸಾರ್ಥಕತೆ ಇರುತ್ತದೆ. ಅನ್ಯರ ಬದುಕನ್ನು ಕಸಿದುಕೊಂಡು ಪಡೆದುಕೊಂಡ ಗೆಲುವಿಗೆ ಬೆಲೆ ಇಲ್ಲ. ಇದೇ ಅರ್ಥದಲ್ಲಿ ನಿಜವಾದ ‘ಮ್ಯಾನ್ ಆಫ್ ದಿ ಮ್ಯಾಚ್’ ಯಾರು ಎಂಬುದನ್ನು ಈ ಸಿನಿಮಾದ ಮೂಲಕ ಹೇಳಲು ಹೊರಟಿದ್ದೇವೆ. ಮೌಲ್ಯಗಳ ಜೊತೆಗೆ ಗೆಲ್ಲಿ ಎಂದೂ ಹೇಳಲು ಹೊರಟಿದ್ದೇವೆ. ■

## ಅಬ್ಬಬ್ಬ! ಫುಲ್ ಕಾಮಿಡಿ!

ಕೆ.ಎಂ. ಚೈತನ್ಯ 2013ರಲ್ಲಿ ‘ಪರಾರಿ’ ಎಂಬ ಕಾಮಿಡಿ ಸಿನಿಮಾಕ್ಕೂ ಆ್ಯಕ್ಷನ್ ಕಟ್ ಹೇಳಿದ್ದರು. ಒಂಬತ್ತು ವರ್ಷಗಳ ನಂತರ ಮತ್ತೆ ನಗೆಬುಗ್ಗೆ ಉಕ್ಕಿಸಲು ಅವರು ಸಜ್ಜಾಗಿದ್ದಾರೆ. ಈಗ ‘ಅಬ್ಬಬ್ಬ’ ಅನ್ನುತ್ತಿದ್ದಾರೆ. ಲಿಖಿತ್ ಶೆಟ್ಟಿ ಮತ್ತು ಅಮೃತಾ ಅಯ್ಯಂಗಾರ್ ಜೊತೆ ಒಂದಿಷ್ಟು ಹೊಸ ನಟರನ್ನೂ ಇಟ್ಟುಕೊಂಡು ನಿರ್ದೇಶಿಸುತ್ತಿರುವ ಅವರ ಸಿನಿಮಾವನ್ನು ಮಲಯಾಳಂ ನಟಿ ಆ್ಯನ್ ಆಗಸ್ಟಿನ್ ಮತ್ತು ‘ಅಂಗಮಲ್ಲೈ ಡೈರೀಸ್’ ಸಿನಿಮಾ ಮಾಡಿದ್ದ ಸಂಸ್ಥೆ ನಿರ್ಮಾಣ ಮಾಡುತ್ತಿದೆ. ಇತ್ತೀಚೆಗೆ ಚಿತ್ರದ ಫಸ್ಟ್ ಲುಕ್ ಕೂಡ ರಿಲೀಸ್ ಆಗಿದೆ.

‘ಇದು ನಕ್ಕು ನಗಿಸುವ ಸಿನಿಮಾ. ಲಿಖಿತ್ ಶೆಟ್ಟಿ ಮತ್ತು ಅಮೃತಾ ಅಯ್ಯಂಗಾರ್ ಮುಖ್ಯಪಾತ್ರಗಳಲ್ಲಿ ನಟಿಸಿದ್ದಾರೆ. ಜೊತೆಗೆ ಅಜಯ್ ರಾಜ್, ತಾಂಡವ್, ಧನು ಆಚಾರ್, ಶರತ್ ಲೋಹಿತಾಶ್ವ, ವಿಜಯ ಚೆಂಡೂರು ಮತ್ತು ಅವಿನಾಶ್ ಕೂಡ ತಾರಾಗಣದಲ್ಲಿದ್ದಾರೆ’ ಎಂದು ತಮ್ಮ ಸಿನಿಮಾ ತಾರಾಗಣದ ಕುರಿತು ಮಾಹಿತಿ ನೀಡಿದ್ದಾರೆ ಚೈತನ್ಯ.ಅಮೃತಾ ಮತ್ತು ಲಿಖಿತ್ ಒಟ್ಟಿಗೆ ನಟಿಸಿದ್ದ ‘ಫ್ಯಾಮಿಲಿ ಪ್ಯಾಕ್’ ಸಿನಿಮಾ ಒಟಿಟಿಯಲ್ಲಿ ತೆರೆಕಂಡಿತ್ತು. ಅದೂ ಕಾಮಿಡಿ ಜಾನರ್ ಸಿನಿಮಾವೇ ಆಗಿದ್ದರೂ ಅಂಥ ಒಳ್ಳೆಯ ಮಾತುಗಳೇನೂ ಕೇಳಿಬಂದಿರಲಿಲ್ಲ. ಈ ಸಿನಿಮಾದಲ್ಲಿ ಅಮೃತಾ – ಲಿಖಿತ್ ಜೋಡಿ ಮತ್ತೆ ಒಂದಾಗಿದೆ. ಈಗಾಗಲೇ ಸಿನಿಮಾದ ಚಿತ್ರೀಕರಣ ಮುಕ್ತಾಯವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ಹಂತದ ಕೆಲಸಗಳು ನಡೆಯುತ್ತಿವೆ. ■

